**ರಾಜ್ಯದಲ್ಲಿ ಕಳಪೆ ಸೂರ್ಯಕಾಂತಿ ಬೀಜದ ಪೂರೈಕೆ ಕುರಿತು**

2372(3029) : ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ (ತ್ರಿಕೋಟ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ ವರ್ಷ ಕಳಪೆ ಸೂರ್ಯಕಾಂತಿ ಬೀಜಗಳನ್ನು ಪೂರೈಸಲಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಕುಷ್ಟಗಿ ತಾಲ್ಲೂಕು ತಳವಗೇರಾ ರೈತರಿಗೆ ಸೂರ್ಯಕಾಂತಿ ಕಳಪೆ ಬೀಜ ನೀಡಲಾಗಿದ್ದು, ಇದನ್ನು ಸರ್ಕಾರಕ್ಕೆ ಕೃಷಿ ಅಧಿಕಾರಿಗಳು ತಿಳಿಸಿರುತ್ತಾರೆಯೇ;

ಇ) ಹಾಗಾದರೆ, ರೈತರು ಬೀಜ ಮಾರಾಟ ಮಾಡಿದವರ ವಿರುದ್ಧ ಮತ್ತು ಅಧಿಕಾರಿಗಳ ವಿರುದ್ಧ, ಧರಣಿ ನಡೆಸಿದ ವಿಷಯವಾಗಿ ಸರ್ಕಾರ ಏನು ಕ್ರಮ ಕೈಗೊಂಡಿದೆ;

ಈ) ಕಳಪೆ ಬೀಜ ಪಡೆದು ಬಿತ್ತನೆ ಕೈಗೊಂಡು ಹಾನಿಗೊಳಗಾಗಿರುವಂತಹ ರೈತರಿಗೆ ಸರ್ಕಾರ ಏನು ಪರಿಹಾರ ನೀಡಿದೆ. ಪೂರೈಕೆದಾರರ ವಿರುದ್ಧ ಏನು ಕಟ್ಟುನಿಟ್ಟಿನ ಕ್ರಮ ಜರುಗಿಸಿದೆ?

ಶ್ರೀ ಪಾಟೀಲ್ ವಿ.ಎಸ್. ಕೌಜಲಗಿ (ಕೃಷಿ ಸಚಿವರು)

ಅ) ಸೂರ್ಯಕಾಂತಿ ಬೆಳೆ ವಿಫಲವಾದ ಬಗ್ಗೆ 2002 ಮುಂಗಾರಿನಲ್ಲಿ ಕೊಪ್ಪಳ ಜಿಲ್ಲೆಯಲ್ಲಿ ಪ್ರಕರಣ ವರದಿಯಾಗಿತ್ತು.

ಆ) ಸೂರ್ಯಕಾಂತಿ ಬೆಳೆ ವಿಫಲವಾದ ಬಗ್ಗೆ ಜಂಟಿ ಕೃಷಿ ನಿರ್ದೇಶಕರು, ಕೊಪ್ಪಳ ಇವರು ವರದಿ ಮಾಡಿರುತ್ತಾರೆ.

ಇ) ಕುಷ್ಟಗಿ ತಾಲ್ಲೂಕಿನ ತಳವಗೇರಾ ಗ್ರಾಮ ಸೇರಿದಂತೆ ಚಿಲ್ಲಿಗೇರಿ, ಯಲಬುಂಜಾ ಮತ್ತು ಹನುಮಸಾಗರ ಗ್ರಾಮಗಳಲ್ಲಿ ಸೂರ್ಯಕಾಂತಿ ಬೆಳೆ ವಿಫಲತೆಯ ಬಗ್ಗೆ ಗ್ರಾಮಸ್ಥರಿಂದ ದೂರು ಬಂದ ಹಿನ್ನೆಲೆಯಲ್ಲಿ ಕೃಷಿ ಇಲಾಖೆಯ ಅಧಿಕಾರಿಗಳು ಮತ್ತು ಕೃಷಿ ವಿಶ್ವವಿದ್ಯಾಲಯದ ಅಧಿಕಾರಿಗಳು ಮತ್ತು ಕೃಷಿ ವಿಶ್ವವಿದ್ಯಾಲಯದ ತಜ್ಞರುಗಳ ತಂಡದೊಂದಿಗೆ ಹಲವು ತಾಲ್ಲೂಕುಗಳಿಗೆ ಭೇಟಿ ನೀಡಿ ಪರಿಶೀಲಿಸಲಾಯಿತು. ಸದರಿ ವರದಿ ಪ್ರಕಾರ 2002ರ ಮುಂಗಾರಿನಲ್ಲಿ ಉಂಟಾದ ಹವಾಮಾನ ವೈಪರೀತ್ಯದಿಂದಾಗಿ ಸೂರ್ಯಕಾಂತಿ ಬೆಳೆಯಲ್ಲಿ ನಂಜಾಣು ರೋಗದ ತೀವ್ರತೆ ಕಂಡು ಬಂದಿದ್ದು, ಜೊತೆಗೆ ಸ್ವಲ್ಪ ಪ್ರಮಾಣದಲ್ಲಿ ಕೆಲವು ಕ್ಷೇತ್ರಗಳಲ್ಲಿ ಒಂದಕ್ಕಿಂತ ಹೆಚ್ಚು ತೊಂದರೆಗಳು ಕಂಡು ಬಂದಿದ್ದು, ಇಳುವರಿಯಲ್ಲಿ ಕುಂಠಿತವಾಗಿರುತ್ತದೆ. ಅಲ್ಲದೆ ಖುಷ್ಕಿ ಪ್ರದೇಶದಲ್ಲಿ ಮುಂಗಾರು ಸಂಪೂರ್ಣ ವೈಫಲ್ಯವಾದ ಪ್ರಯುಕ್ತ ತೇವಾಂಶ ಕೊರತೆಯಿಂದ ಇಳುವರಿ ಕಡಿಮೆಯಾಗಿರುತ್ತದೆ. ಒಟ್ಟಾರೆ ವರದಿಯಲ್ಲಿ ಕಳಪೆ ಬೀಜದಿಂದ ಬೆಳೆ ಹಾನಿ ಬಗ್ಗೆ ಸ್ಪಷ್ಟ ಅಭಿಪ್ರಾಯ ನೀಡಿರುವುದಿಲ್ಲ. ಆದರೂ ಬೀಜ ಸಂಸ್ಥೆಯ ಕೆಲವು ನ್ಯೂನತೆಗಳನ್ನು ಗಮನಿಸಿ ಇಲಾಖೆ ವತಿಯಿಂದ ಚಾಲ್ತಿಯಲ್ಲಿರುವ ಬೀಜ ಕಾಯಿದೆಗಳನ್ವಯ ದಾವೆಯನ್ನು ಹೂಡಲು ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದು, ಪ್ರಕರಣವು ಪರಿಶೀಲನೆಯಲ್ಲಿರುತ್ತದೆ.

ಈ) ಚಾಲ್ತಿಯಲ್ಲಿರುವ ಬೀಜ ಕಾಯಿದೆಗಳನ್ವಯ ಹಾನಿಗೊಳಗಾದ ರೈತರಿಗೆ ಬೆಳೆ ನಷ್ಟ ಪರಿಹಾರ ಕೂಡಿಸುವ ಅವಕಾಶ ಕಾನೂನಿನಲ್ಲಿ ಇಲ್ಲ. ಆದರೆ ಹಾನಿಗೊಳಗಾದ ರೈತರು ನಷ್ಟ ಪರಿಹಾರವನ್ನು ಪಡೆಯಲು ಗ್ರಾಹಕರ ವೇದಿಕೆಗೆ ಹೋಗಲು ಅವಕಾಶವಿದ್ದು ಸೂಕ್ತ ಮಾರ್ಗದರ್ಶನ ನೀಡಲಾಗಿದೆ.

ಆದರೆ ಯಾವ ರೈತರೂ ಗ್ರಾಹಕರ ವೇದಿಕೆಗೆ ದೂರು ಸಲ್ಲಿಸಿರುವುದಿಲ್ಲವೆಂದು ತಿಳಿದು ಬಂದಿದೆ. ಬೀಜ ಪೂರೈಕೆದಾರರ ವಿರುದ್ಧ ಬೀಜ ಅಧಿನಿಯಮ, ನಿಯಮಾವಳಿ ಪ್ರಕಾರ ಕುಷ್ಟಗಿ ತಾಲ್ಲೂಕಿನ ಜೆ.ಎಂ.ಎಫ್.ಸಿ. ನ್ಯಾಯಾಲಯಕ್ಕೆ ಸಹಾಯಕ ಕೃಷಿನಿರ್ದೇಶಕರು, ಕುಷ್ಟಗಿ ಇವರು ಮೊಕದ್ದಮೆ ಹೂಡಲು ದಾಖಲಾತಿಗಳನ್ನು ಸಲ್ಲಿಸಿರುತ್ತಾರೆ. ಅಲ್ಲದೆ ಬೀಜ ಮಾರಾಟ ಮಾಡಿದ ಶ್ರೀ ಓಂ ಶಕ್ತಿ ಫರ್ಟಿಲೈಸರ್ಸ್, ಹನುಮಸಾಗರ ಇವರ ಬೀಜ ಪರವಾನಗಿ ಪತ್ರವನ್ನು ಅಮಾನತ್ತಿನಲ್ಲಿಡಲಾಗಿತ್ತು.

**ಪಿರಿಯಾಪಟ್ಟಣ ತಾಲ್ಲೂಕಿನ ಬೈಲಕುಪ್ಪೆಯ ಕೃಷಿ ಇಲಾಖೆಗೆ ಸೇರಿದ ಜಮೀನಿನ ವಿಸ್ತೀರ್ಣ ಕುರಿತು**

2337(2855) : ಶ್ರೀ ಬಸವರಾಜು ಹೆಚ್.ಸಿ. (ಪಿರಿಯಾಪಟ್ಟಣ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪಿರಿಯಾಪಟ್ಟಣ ತಾಲ್ಲೂಕಿನ ಬೈಲಕುಪ್ಪೆ ಗ್ರಾಮದಲ್ಲಿ ಕೃಷಿ ಇಲಾಖೆಗೆ ಸೇರಿದ ಜಮೀನಿನ ವಿಸ್ತೀರ್ಣ ಎಷ್ಟು;

ಆ) ಸದರಿ ಜಮೀನು ಪಾಳು ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಆ ಜಮೀನಿನಲ್ಲಿರುವ ಬೆಲೆ ಬಾಳುವ ವಿವಿಧ ಜಾತಿಯ ಮರಗಳು ಎಷ್ಟು;

ಈ) ಈ ಮರಗಳಲ್ಲಿ ತೇಗ ಹಾಗೂ ಇನ್ನಿತರೆ ಮರಗಳು ಕಳುವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಬಂದಿದ್ದಲ್ಲಿ ಜಮೀನು ಹಾಗೂ ಮರಗಳ ರಕ್ಷಣೆಗೆ ಯಾವ ಕ್ರಮ ತೆಗೆದುಕೊಳ್ಳಲಾಗಿದೆ,

ಊ) ಸದರಿ ಜಮೀನನ್ನು ಅರಣ್ಯ ಇಲಾಖೆಗೆ ಸೇರಿಸಲು ಪ್ರಸ್ತಾವನೆ ಬಂದಿದೆಯೆ;

ಋ) ಬಂದಿದ್ದಲ್ಲಿ, ಮಂಜೂರಾತಿ ನೀಡಲಾಗಿದೆಯೇ?

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು)

ಅ) ಪಿರಿಯಾಪಟ್ಟಣ ತಾಲ್ಲೂಕು ಬೀಜೋತ್ಪಾದನಾ ಕೇಂದ್ರ, ಬೈಲಕುಪ್ಪಗೆ ಸೇರಿದ ಒಟ್ಟು ಜಮೀನಿನ ವಿಸ್ತೀರ್ಣ 208.16 ಎಕರೆ (ಇದರಲ್ಲಿ 20.14 ಎಕರೆ ಕರಾಬು ಸೇರಿದೆ)

ಆ) ಈ ಜಮೀನನ್ನು ಅರಣ್ಯ ಇಲಾಖೆಗೆ ವರ್ಗಾವಣೆ ಮಾಡುವ ಹಂತದಲ್ಲಿದ್ದುದರಿಂದ ಬೆಳೆ ಯೋಜನೆ ಹಾಕಿಕೊಂಡಿರಲಿಲ್ಲ. 2003–04ನೇ ಸಾಲಿನಲ್ಲಿ ಬರಪರಿಹಾರ ಯೋಜನೆಯಡಿ 50 ಎಕರೆ ಮುಸುಕಿನ ಜೋಳವನ್ನು ಮೇವಿಗಾಗಿ ಬೆಳೆ ಬೆಳೆಯಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಇ) ಆ ಜಮೀನಿನಲ್ಲಿರುವ ವಿವಿಧ ಜಾತಿಯ ಮರಗಳು ಒಟ್ಟು ಸಂಖ್ಯೆ 405 3344 ತೇಗದ ಸಸಿಗಳು (2 ರಿಂದ 3ವರ್ಷ) 8000 ಬಿದುರು

ಈ) ಇದುವರೆವಿಗೂ ಯಾವುದೇ ಮರಗಳು ಕಳುವಾಗಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಉ) ಜಮೀನಿನಲ್ಲಿರುವ ಮರಗಳನ್ನು ರಕ್ಷಿಸಲು ಇಬ್ಬರು ಡಿ ಗ್ರೂಪ್ ನೌಕರರನ್ನು ಹಾಗೂ ಗುತ್ತಿಗೆ ಆಧಾರದ ಮೇಲೆ 3 ಜನ ಕಾವಲುಗಾರರನ್ನು ನೇಮಿಸಲಾಗಿದೆ.

ಊ) ಹೌದು.

ಋ) ಸರ್ಕಾರದ ಪರಿಶೀಲನೆಯಲ್ಲಿದೆ.